ಅನುಭವ. ಅದು ಅಮೋಘ ಸಾಧನೆ. ಈ ಬಾರಿ ಖಚಿತವಾಗಿ ನಾನು ನಿವೃತ್ತನಾಗಿ ಬಿಡಬೇಕು. ಗಟ್ಟಿ ಮನಸ್ಸು ಮಾಡಿದ್ದೇನೆ. ಈ ಕೊನೆಯ ವ್ಯವಹಾರದಲ್ಲಿ ಮೂರು ಕೋಟಿ ರೂಪಾಯಿ ಕೈ ಹತ್ತಿದ ಮೇಲೆ, ನನ್ನ ಮುವತ್ತು ವರ್ಷಗಳ ಇತಿಹಾಸವನ್ನು ಕನಸೆಂಬಂತೆ ಅಳಿಸಿ ಹಾಕಬೇಕು.

ಸೈಯದ್ ಒಳ ಬಂದ. 'ಯಾರೋ ಹೆಂಗಸು ಬಾಸ್, ನಿಮ್ಮೊಡನೆಯೇ ಮಾತಾಡಬೇಕಂತೆ; ಕಾಲ್ ಟ್ರೇಸ್ ಮಾಡಿದ್ದೇನೆ. ಇಲ್ಲೇ ಬೆಂಗಳೂರಿನ ಪ್ರತಿಷ್ಠಿತ ಬಡಾವಣೆಯಿಂದ ಬಂದಿದೆ. ಯಾವುದೇ ಅಪಾಯದ ಸೂಚನೆ ಇಲ್ಲ.'

ನನಗೆ ಆಶ್ಚರ್ಯವಾಯಿತು. ನನ್ನ ಈ ಪ್ರೈವೇಟ್ ನಂಬರಿನಲ್ಲಿ ಯಾವುದೇ ಹೆಂಗಸರ ಹೆಸರಿಲ್ಲ. ನನ್ನ ಯಾದಿಯ ಪೊಲೀಸರಲ್ಲಿ ಯಾರೂ ಹೆಂಗಸರಿಲ್ಲ. ವ್ಯವಹಾರಕ್ಕೆ ಸಂಬಂಧಪಟ್ಟಂತೆ ಯಾರೂ ನನ್ನೊಡನೆ ನೇರವಾಗಿ ಮಾತನಾಡುವ ಛಾನ್ಸೇ ಇಲ್ಲ. ಅಂಥದ್ದರಲ್ಲಿ, ನನ್ನ ಪ್ರೈವೇಟ್ ನಂಬರಿಗೆ ಯಾರೋ ಹೆಂಗಸಿನಿಂದ ಕರೆ!

ನಾನು ಸೈಯದ್‌ನಿಂದ ಮೊಬೈಲ್ ಪಡೆದು ಅದನ್ನು ಕಿವಿಗೆ ಹಚ್ಚಿದೆ.

'ಹಲೋ.'

'ಹಲೋ' ಅತ್ತಲಿಂದ ಮಧುರವಾದ ದನಿ ಉಲಿಯಿತು.

'ಕುಮಾರಣ್ಣ ಹೌದಾ?' ಮತ್ತೊಂದು ಅಚ್ಚರಿ! ನನ್ನನ್ನು ಈ ಪರಿ ಕುಮಾರಣ್ಣ ಎಂದು ಕರೆದವರಿಲ್ಲ. ಬಹಳ ಜನಕ್ಕೆ ನಾನು ಬಾಸ್. ತೀರಾ ಆಪ್ತರಿಗೆ ಕುಮಾರ್ ಸಾಬ್. ಪೊಲೀಸರಿಗೆ ಕುಮಾರ್ ಸರ್.

'ಹೌದು' ನಾನು ಉತ್ತರಿಸಿ, ಆ ದನಿಗಾಗಿ ಕುತೂಹಲದಿಂದ ಕಾದೆ. 'ನಾನು ನಿಮಗೆ ನೇರವಾಗಿ ಪರಿಚಿತಳಲ್ಲ, ಆದರೂ ಪರಿಚಿತಳೇ. ನಿಮ್ಮಿಂದ ನನಗೆ ಒಂದು ಸಹಾಯ ಆಗಬೇಕಾಗಿತ್ತು.'

'ಹೇಳಮ್ಮಾ... ಆದರೆ, ನಾನು ಈ ತರಹ, ಯಾರೋ ಗೊತ್ತಿಲ್ಲದವರೊಡನೆ ಯಾವ ವ್ಯವಹಾರಕ್ಕೂ ಕೈಹಾಕುವುದಿಲ್ಲ.'

'ನನಗೂ ಗೊತ್ತಿದೆ ಕುಮಾರಣ್ಣ. ಆದರೆ, ಈ ಒಂದು ದಾರಿ ಬಿಟ್ಟು ನನಗೆ ಇನ್ನೇನೂ ಹೊಳೆಯಲಿಲ್ಲ. ನನ್ನಿಂದ ನಿಮಗೆ ಯಾವ ಸಮಸ್ಯೆಯೂ ಆಗುವುದಿಲ್ಲ. ನನಗೆ ಮಾತ್ರ ನನ್ನ ಇಡೀ ಬದುಕು ನನ್ನ ಕೈ ಸೇರುತ್ತದೆ.'

'ಸರಿ, ಹೇಳು. ನಿನ್ನ ಈ ಕರೆಯ ಹಿಂದೆ ಏನಾದರೂ ಕೆಟ್ಟ ಆಲೋಚನೆಗಳಿದ್ದರೆ, ಬಹುಶಃ ನೀನು ಭೂಮಿಯ ಮೇಲಿನ ನರಕ ಏನು ಎಂದು ಸದ್ಯದಲ್ಲೇ ತಿಳಿಯುತ್ತೀಯ'– ನನ್ನ ಮಾತು ತೀರಾ ಕಠಿಣವಾಯಿತೇನೋ ಎಂದು ನನಗೇ ಅನ್ನಿಸಿತು. ನಾನು ಸುಲಭವಾಗಿ ಕರೆಯನ್ನು ಕಟ್ ಮಾಡಬಹುದಿತ್ತು. ಅಲ್ಲದೆ, ಇದು ನನ್ನ ಪ್ರೈವೇಟ್ ನಂಬರ್ ಆದ್ದರಿಂದ, ಅದನ್ನು ಮತ್ತೆ ಟ್ರೇಸ್ ಮಾಡಲು ಸಾಧ್ಯವೇ ಇರಲಿಲ್ಲ.

'ನನ್ನನ್ನು ನಂಬಿ ಪ್ಲೀಸ್. ನಾನು ನಿಮ್ಮನ್ನ ನೋಡಬೇಕು.'

'ನಾನು ಮಾತನಾಡಿದ್ದೇ ಹೆಚ್ಚು. ನಾನು ಯಾರನ್ನೂ ಭೇಟಿ ಮಾಡುವುದು ಅಸಾಧ್ಯದ ಮಾತು.'

'ಹಾಗೆನ್ನಬೇಡಿ ಅಣ್ಣಾ; ಬಹುಶಃ ನನ್ನನ್ನು ನೋಡಿದ ಮೇಲೆ, ನೀವು ಈ ಮಾತನಾಡಲಾರಿರಿ' ಅವಳ ದನಿ ಸುಸ್ಪಷ್ಟವಾಗಿತ್ತು. ಅವಳು ಅಣ್ಣಾ ಎಂದುದರಲ್ಲಿ ಸಹಜತೆ ಇತ್ತು.

'ಹೂಂ, ಹೇಳು.'

'ಒಂದು ಸಾರಿ ನಾನು ನಿಮ್ಮನ್ನು ಭೇಟಿಯಾಗಬಹುದೆ?'